# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.34/2013
ಸಿಡಬ್ಲ್ಯೂ.9 ಪಿಡಬ್ಲ್ಯೂ.4

ಸಾಕ್ಷಿಯ ಹೆಸರು - ಅಬ್ದುಲಕಲಾಂ ಅಬ್ದುಲಹಮೀದ ಮುಲ್ಲಾ

ವಯಸ್ಸು - 63 ವರ್ಷ

ಉದ್ಯೋಗ - ನಿವೃತ್ತ ಎ.ಎಸ.ಆಯ.

ವಾಸ - ಬೆಳಗಾವಿ

ದಿನಾಂಕಃ 07-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು 2010 ರಿಂದ 2015 ರವರೆಗೆ ಸಿ.ಹೆಚ್.ಸಿ ಅಂತಾ ವಿಶೇಷ ಪೋಲಿಸ ಠಾಣೆ ಅಲಾನಿ ದಳದಲ್ಲಿ ಕೆಲಸ ಮಾಡಿರುತ್ತೇನೆ.

ದಿಃ 16-11-2012 ರಂದು ನಾನು ಠಾಣೆಯಲ್ಲಿದ್ದಾಗ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು 10-30 ಗಂಟೆಗ ಠಾಣೆಗೆ ಬಂದು ಪಿರ್ಯಾದಿ ಕೊಟ್ಟಿದ್ದು, ಅದನ್ನು ಸ್ವೀಕೃತಿ ಮಾಡಿಕೊಂಡು ವಿಶೇಷ ಪೋಲಿಸ ಠಾಣೆ ಅಲಾನಿ ದಳ ಅಪರಾಧ ಸಂಃ 117/2012 ನೇದ್ದಕ್ಕೆ ಕಲಂ 32, ಅಬಕಾರಿ ಕಾಯ್ದೆ 328 ಆಯ.ಪಿ.ಸಿ. ನೇದ್ದಕ್ಕೆ ದಾಖಲ ಮಾಡಿಕೊಂಡೆನು. ಸದರಿ FIR ಪ್ರತಿಯನ್ನು ಪಿಸಿ 1355 ರವರ ಮುಖಾಂತರ ಮಾನ್ಯ ನ್ಯಾಯಾಲಯಕ್ಕೆ ಮೂಲ ಪ್ರತಿಯನ್ನು ಕಳುಹಿಸಿಕೊಟ್ಟೆನು. ಆರೋಪಿಯನ್ನು ಯೋಗ್ಯ ಬೆಂಗಾವಲಿನಲ್ಲಿ ರಿಮಾಂಡ ಯಾದಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಮಾದರಿ ತೆಗೆದ ಮುದ್ದೆ ಮಾಲನ್ನು ನನ್ನ ತಾಬಾದಲ್ಲಿ ಇಟ್ಟುಕೊಳ್ಳಲು ಪಿಎಫ ಭರಣಾ ಮಾಡಿ ಮಾನ್ಯ ನ್ಯಾಯಲಯಕ್ಕೆ ಕಳುಹಿಸಿ ಅನುಮತಿ ಪಡೆದುಕೊಂಡೆನು. ಉಳಿದ ಮುದ್ದೆ ಮಾಲನ್ನು ಸಂಬಂಧ ಪಟ್ಟ ಅಧಿಕಾರಿಗಳಿಗೆ ಕಳುಹಿಸಲು ಅದಿಕೃತ ಅಧಿಕಾರಿ ಅಬಕಾರಿ ಇಲಾಖೆ ಬೆಳಗಾವಿ ರವರಿಗೆ ಪಿಎಫ ವಿನಂತಿಸಿಕೊಂಡೆನು. ದಿಃ 21-11-2012 ರಂದು ಅದಿಕೃತ ಅಧಿಕಾರಿ ಅಬಕಾರಿ ಇಲಾಖೆ ಬೆಳಗಾವಿ ರವರು ತಮ್ಮ ಸಂಃ DCE/BGM/CON/327/2012-13 ದಿಃ 21-11-2012 ಅನುಮತಿ ಕೊಟ್ಟಿದ್ದು ಪ್ರಕರಣದಲ್ಲಿ ಅಳುವಡಿಸಿಕೊಂಡೆನು. ದಿಃ 24-11-2012 ರಂದು ಚಾಸಾ-7 ಇವರ ಕಡೆಗೆ ಸ್ಯಾಂಪಲ ತೆಗೆದ ಮಾಲನ್ನು RFSL ಅಬಕಾರಿ ಇಲಾಖೆ ಬೆಂಗಳೂರು ರವರಿಗೆ ಪರೀಕ್ಷೆ ಕುರಿತು ಮಾನ್ಯ ಡಿಎಸಪಿ ಅಲಾನಿ ಘಟಕ ಬೆಳಗಾವಿ ರವರ ಮುಖಾಂತರ ಸಂಬಂಧಪಟ್ಟ ಕಾಗದ ಪತ್ರಗಳೊಂದಿಗೆ ಕಳುಹಿಸಿದೆನು. ದಿಃ 28-11-2012 ರಂದು ಚಾಸಾ-7 ಇವರು ಬೆಂಗಳೂರಿನಿಂದ ಮರಳಿ ಬಂದಿದ್ದು ವರದಿಯನ್ನು ನನಗೆ ತೋರಿಸಿದ್ದು ಅದರಲ್ಲಿ ಮಾದರಿ ಮಾಲು ಮಾನವ ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂದು ವರದಿ ಆಗಿದ್ದು ಇರುತ್ತದೆ. ನಂತರ ನಾನು ಮಾನ್ಯ ಡಿಎಸಪಿ ಅಲಾನಿ ಘಟಕ ಬೆಳಗಾವಿ ರವರಿಗೆ ಕಲಂ 328 ಆಯ.ಪಿ.ಸಿ ಯನ್ನು ದೋಷಾರೋಪಣ ಪಟ್ಟಿಯಲ್ಲಿ ಕಡಿಮೆ ಮಾಡಲು ಪತ್ರದೊಂದಿಗೆ ವಿನಂತಿಸಿಕೊಂಡೆನು. ನಂತರ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-10 ರವರು ಕಡತವನ್ನು ಪಡೆದುಕೊಂಡು ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ನಿಪಿ-2 ರ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ರಸಾಯನಿಕ ಪರೀಕ್ಷಾ ವರದಿಯನ್ನು ನಿಪಿ-4 ಎಂದು, ಅಬಕಾರಿ ಗೋಕಾಕ ರವರಿಗೆ ಬರೆದ ಪತ್ರ ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಡಿಎಸಪಿ ಅಲಾನಿ ದಳ ಬೆಳಗಾವಿ ರವರಿಗೆ ಬರೆದ ಪತ್ರ ನಿಪಿ-6, ಸಾಕ್ಷಿಯ ಸಹಿ ನಿಪಿ-6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಾನು ಪಿರ್ಯಾದಿಯನ್ನು ಸ್ವೀಕರಿಸಿದ ನಂತರ ಗುನ್ನಾ ಜಾಗೆಗೆ ಭೆಟ್ಟಿ ನೀಡಿರುವುದಿಲ್ಲಾ ಏಕೆಂದರೆ ಚಾಸಾ-1 ರವರು ಪಂಚನಾಮೆ ಮಾಡಿ ಸಲ್ಲಿಸಿರುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡ ಸಮಯ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿ ಸುಳ್ಳು ಇವೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತುಕೇಳಿ ತನಿಖೆ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

Sd/-
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.